# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್ – 2021)

# RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi – 591156

(NAAC Accredited with B+ Grade - 2021)

E-mail: rcuregistrar@gmail.com
registrar@rcub.ac.in

ಕುಲಸಚಿವರ ಕಾರ್ಯಾಲಯ

Office of the Registrar

Website: www.rcub.ac.in
Phone No.: 0831-2565203/34


ದಿನಾಂಕ: 15–11–2021

## ಸೂಚನೆಗಳು

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 371(ಜೆ) ವೃಂದದ ಸ್ಪರ್ಧಾತ್ಮಕ ಪರೀಕ್ಷೆಯ ವಿವರಗಳು ಈ ಮುಂದಿನಂತಿವೆ.**

1. ದಿನಾಂಕ: 21–11–2021 ರಂದು ಬೆಳಗಿನ 11.00 ರಿಂದ 01–00 ಗಂಟೆವರೆಗೆ 'ಉಪಕುಲಸಚಿವರು' ಹಾಗೂ 'ಸಹಾಯಕ ಕುಲಸಚಿವರು' ಹುದ್ದೆಗೆ ಪರೀಕ್ಷೆಯು ನಡೆಯಲಿದೆ. ಮಧ್ಯಾಹ್ನ 02–00 ರಿಂದ 04–00 ಗಂಟೆವರೆಗೆ 'ಕಛೇರಿ ಅಧೀಕ್ಷಕರು' ಹುದ್ದೆಯ ಪರೀಕ್ಷೆಯು ಬೆಳಗಾವಿಯ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ನಡೆಯಲಿದೆ. ಅಭ್ಯರ್ಥಿಯು ಪರೀಕ್ಷೆ ಆರಂಭಕ್ಕಿಂತ 30 ನಿಮಿಷ ಮುಂಚೆ ಹಾಜರಿರತಕ್ಕದ್ದು.
2. ಪರೀಕ್ಷೆ ಒಂದು ಹಂತದಲ್ಲಿ ನಡೆಯಲಿದ್ದು 100 ಬಹು ಆಯ್ಕೆ ಪ್ರಶ್ನೆಗಳಿರುವ ಪರೀಕ್ಷೆಯನ್ನು 100 ಅಂಕಗಳಿಗೆ ನಡೆಸಲಾಗುವುದು.
3. ಪ್ರತಿ ಪ್ರಶ್ನೆಗಳಿಗೆ ಸಮಾನ ಅಂಕಗಳನ್ನು ನಿರ್ದಿಷ್ಟ ಪಡಿಸಲಾಗಿರುತ್ತದೆ. ನಕಾರಾತ್ಮಕ ಅಂಕಗಳಿರುವುದಿಲ್ಲ.
4. ಪ್ರಶ್ನೆ ಪತ್ರಿಕೆಯು ಸಾಮಾನ್ಯ ಅಧ್ಯಯನದ ವಿಷಯವಾಗಿದ್ದು, ಪ್ರಚಲಿತ ವಿದ್ಯಮಾನಗಳು, ಸಾಮಾನ್ಯ ವಿಜ್ಞಾನ, ಸಾಮಾನ್ಯ ಗಣಿತ, ಕರ್ನಾಟಕದ ಇತಿಹಾಸ, ಭೂಗೋಳಶಾಸ್ತ್ರ ಭಾರತದ ಇತಿಹಾಸ, ಭಾರತದ ಭೂಗೋಳಶಾಸ್ತ್ರ, ಸಮಾಜ ವಿಜ್ಞಾನ, ಸಾಮಾನ್ಯ ಬೌದ್ಧಿಕ ಜ್ಞಾನ ಪ್ರಾದೇಶಿಕ ಹಾಗೂ ಕರ್ನಾಟಕದ ಚರಿತ್ರೆ, ಪರಂಪರೆ, ಸಾಹಿತ್ಯ, ಲಲಿತಕಲೆ, ಭಾರತದ ಸ್ವಾತಂತ್ರ್ಯ ಚಳುವಳಿ, ಸಾರ್ವಜನಿಕ ಆಡಳಿತ, ವಿಶ್ವವಿದ್ಯಾಲಯ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳ ಪ್ರಶ್ನೆಗಳಿರುತ್ತವೆ. ಅಲ್ಲದೇ ದೈನಂದಿನ ಗ್ರಹಿಕೆಯ ಬೌದ್ಧಿಕ ಸಾಮರ್ಥ್ಯವನ್ನು ಅಳೆಯುವ ಪ್ರಶ್ನೆಗಳನ್ನು ನೀಡಲಾಗಿರುತ್ತದೆ.
5. ಪ್ರಶ್ನೆಪತ್ರಿಕೆಯಲ್ಲಿ ಉತ್ತೀರ್ಣರಾಗಲು ಕನಿಷ್ಠ 35 ಅಂಕಗಳನ್ನು ಅಭ್ಯರ್ಥಿಗಳು ಪಡೆಯಬೇಕಾಗಿರುತ್ತದೆ.

ಸಹಿ/–
ಕುಲಸಚಿವರು